ಒಬ್ಬರು ನೆಂಟರಿಷ್ಟರು ಮನೆಯಲ್ಲಿದ್ದೇ ಇರುತ್ತಿದ್ದರು. ದೊಡ್ಡ ಚಿಕ್ಕಪ್ಪಂಗೆ ಮೂವರು ಹೆಣ್ಣುಮಕ್ಕಳು, ಎರಡನೆಯವರಿಗೆ ಎರಡೂ ಗಂಡು, ಕೊನೆಯ ಚಿಕ್ಕಪ್ಪಂಗೆ ಒಂದು ಹೆಣ್ಣು ಒಂದು ಗಂಡು. ಚಿಕ್ಕಮ್ಮಂದಿರೂ ಆಗೆಲ್ಲ ಎಷ್ಟು ಚೆನ್ನಾಗಿ ಮಾತಾಡಿಸುತ್ತಿದ್ದರು! ತನ್ನ ಬೆರಗು ಕಣ್ಣುಗಳಿಗೆ ಅವರೆಲ್ಲ ಚಂದ ಕಾಣುತ್ತಿದ್ದರು. ಅವರಿದ್ದ ದಿನಗಳಲ್ಲಿ ಮನೆಯೆಲ್ಲ ಗಲಗಲ. ಅಜ್ಜಿ, ತಾತಂಗೂ ಖುಷಿ. ಬೆಳದಿಂಗಳು ಬಂತೆಂದರೆ ಅಪ್ಪ ಅಂಗಳ ಗುಡಿಸಿ ಊಟದ ಚಾಪೆಗಳನ್ನು ಹಾಸುತ್ತಿದ್ದರು. 'ಇವ್ನೇ ಊಟ ಇಲ್ಲೇ ತಗೊಂಬಾ, ತಿಂಗ್ಳ ಬೆಳಕು ಹಾಲು ಸುರಿದಂಗಿದೆ' ಎನ್ನುತ್ತಿದ್ದಳು. ಅಡಕೆತೋಟ, ತೆಂಗಿನತೋಟ, ಗದ್ದೆಗಳು, ದನಕರು, ಎಮ್ಮೆಗಳು ಎಂದರೆ ಅಪ್ಪಂಗೆ ತುಂಬಾ ಇಷ್ಟ. 'ಇರೋಳು ಒಬ್ಳು ಮಗಳು. ಬೇಕಾದಷ್ಟು ಓದಲಿ. ನನಗೆ ಮಾತ್ರ ಈ ಭೂಮಿಯ ಕೆಲಸವೇ ಜೀವ್ನ' ಎನ್ನುತ್ತಿದ್ದರು.

'ನೂರು ವರ್ಷ ಬದುಕ್ತೀನಿ ಕಣೇ. ವೈಶಾಲಿಗೂ ನಿಂಗೂ ಏನೂ ಕಮ್ಮಿ ಮಾಡಲ್ಲ. ತಿಂದ್ಕಂಡು ಉಂಡ್ಕೊಂಡು ನೆಮ್ಮದಿಯಾಗಿರಿ' ಅಂತ ಪದೇ ಪದೇ ಅಮ್ಮನಲ್ಲಿ ಹೇಳುತ್ತಿದ್ದರು. ಆದರೆ ತಾನು ಡಿಗ್ರಿ ಮಾಡುತ್ತಿದ್ದಾಗ ಬರೀ ಐವತ್ತಕ್ಕೇ ಇನ್ನಿಲ್ಲವಾದರು. ಅದೇ ನೋವಲ್ಲಿ ಎರಡು ವರ್ಷದೊಳಗೆ ಅಜ್ಜಿ–ತಾತನೂ ಹೋದರು. ಜಮೀನು ಪಾಲು ತಗೊಂಡು ಚಿಕ್ಕಪ್ಪಂದಿರೂ ದೂರಾದ್ರು. ಕಣ್ಮುಚ್ಚಿ ತೆಗೆಯುವುದರಲ್ಲಿ ಎಲ್ಲ ಬದಲಾಯ್ತು. ಉಳಿದದ್ದು ಅಮ್ಮ, ತಾನು ಇಬ್ಬರೇ. ಇಷ್ಟೆಲ್ಲ ಆಘಾತಗಳಿಗೆ ಒಳಗಾದರೂ ಅಮ್ಮ ತನ್ನನ್ನು ಯುನಿವರ್ಸಿಟಿಗೆ ಓದೋಕೆ ಕಳಿಸಿದರು. ಛಲಹಿಡಿದು ಓದಿ ಸಿಇಟಿಯಲ್ಲಿ ರ್‍ಯಾಂಕ್ ತಗೊಂಡು ಲೆಕ್ಚರರ್ ಕೆಲಸಕ್ಕೆ ಸೇರಿದ ದಿನ ಅಮ್ಮ ಖುಷಿಗೆ ಕಣ್ಣೀರು ಹಾಕಿದ್ದರು. 'ವೈಶಾಲಿ, ಗದ್ದೆ ತೋಟ ಗೇಣಿಗೆ ಕೊಟ್ಟು ನಾನು ನಿನ್ನೊತೆ ಬಂದಿರ್ತೀನೆ. ಇಲ್ಲದಿದ್ದರೆ ಹಳೆಯ ನೆನಪುಗಳು; ತುಂಬಾ ಕಷ್ಟ' ಅಂತ ಅವರು ಹೇಳಿದ ತಿಂಗಳಲ್ಲೇ ಪಿಜಿ ಬಿಟ್ಟು ಕಾಲೇಜ್ ಹತ್ತಿರ ಮನೆ ಬಾಡಿಗೆಗೆ ಹಿಡಿದು ಕರೆತಂದದ್ದಾಯ್ತು. ಆಗಲೇ ಶುರುವಾದದ್ದು ಅಮ್ಮನ ಒತ್ತಾಯ, 'ಮದುವೆಯಾಗು ವೈಶಾಲಿ' ಎಂದು. 'ಸುಮ್ನಿರಮ್ಮ, ಇನ್ನೈದು ವರ್ಷ ಮದುವೆ ಮಾತು ಆಡಬೇಡ. ನಾನು ಇನ್ನೊಂದಷ್ಟು ಓದ್ಬೇಕು, ಬರೀಬೇಕು, ಹಕ್ಕಿಗಳ ಫೋಟೊ ತೆಗೆಯಬೇಕು' ಎಂದು ಬಾಯಿ ಮುಚ್ಚಿಸಿದರೂ ಕೇಳದೆ 'ಮದುವೆಯಾಗಿಬಿಡಮ್ಮ. ಎರಡು ಮಕ್ಕಳಾಗ್ಲಿ ಬೇಗ. ಅವುಗಳನ್ನು ನೋಡಿಕೊಂಡು ನೋವು ಮರೀತೀನಿ ಮಾರಾಯ್ತಿ' ಎನ್ನುತ್ತಿದ್ದರು. ಆಗೆಲ್ಲ ಪಾಪ ಅನಿಸುತ್ತಿತ್ತು. ನಲವತ್ತೈದಕ್ಕೇ ಗಂಡನ್ನ ಕಳಕೊಂಡ ಅಮ್ಮ. ವೈಶಾಲಿ ನಿಟ್ಟುಸಿರಿಟ್ಟಳು.

'ಮೇಡಂ, ಹೀಗೆ ಹೇಳ್ತೇನೆ ಅಂತ ತಪ್ಪು ತಿಳೀಬೇಡಿ. ನಿಮಗೆ ಕಾಟನ್ ಸೀರೆ ಚಂದ ಕಾಣುತ್ತೆ. ಯಾವಾಗ್ಲೂ ಇಂಥದ್ದೇ ಉಟ್ಕೊಳ್ಳಿ' ಸಂದೀಪ್ ಆಡಿದ ಮೊದಲ ಮಾತೇ ಅದು. ಬೆಂಗಳೂರಿನ ಟ್ರೈನಿಂಗಲ್ಲಿ ಸಿಕ್ಕ ಕೆಮಿಸ್ಟ್ರಿ ಲೆಕ್ಚರರ್ ಸಂದೀಪನನ್ನು ಅಂದು ವಿಚಿತ್ರವಾಗಿ ನೋಡಿದ್ದಳು ವೈಶಾಲಿ. ಏನು ಉತ್ತರಿಸುವುದೆಂದು ತಡಬಡಿಸುತ್ತಿದ್ದಾಗ, ' ಓ ಸಾರಿ ಮೇಡಂ, ನಾನು ಹೀಗೇ ಸ್ವಲ್ಪ ನೇರ ನಡೆನುಡಿ. ಬೇಜಾರಾಗ್ಬೇಡಿ. ನಾಳೆ ಸಿಗ್ತೇನೆ' ಎಂದು ಗೆಳೆಯರೊಂದಿಗೆ ಹೋಗಿಬಿಟ್ಟಿದ್ದ. ಮತ್ತೆಲ್ಲ ಎಷ್ಟು ಬೇಗ ನಡೆದುಬಿಟ್ಟಿತು! ಮೊದಲಿನಿಂದಲೂ ಮದುವೆ ಅಂದ್ರೆ ಮುಖ ದಪ್ಪ ಮಾಡಿಕೊಳ್ಳುತ್ತಿದ್ದ ವೈಶಾಲಿಗೆ ಸಂದೀಪ ಇಷ್ಟವಾಗಿದ್ದ. ಎಂಥ ಬ್ರಿಲಿಯಂಟ್ ಅವನು! ಸಬ್ಜೆಕ್ಟ್ ಮೇಲಿನ ಅವನ ಹಿಡಿತ ಅವಳಿಗೆ ಆಶ್ಚರ್ಯ ತಂದಿತ್ತು. 'ನೀವು ಬರೆಯೋರು ಓದೋರೆಲ್ಲ ಹೀಗೇ, ಭಾವುಕರು. ಆದರೂ ನಿಮ್ಮಷ್ಟು ಚಂದದವರನ್ನು ನೋಡಿಲ್ಲ ಬಿಡಿ. ಸಿನಿಮಾಕ್ಕೆ ಟ್ರೈ ಮಾಡಿ ಮೇಡಂ. ಹೀರೋಯಿನ್ ಆಗ್ತೀರಾ. ಅಂತೂ ಈ ಟ್ರೈನಿಂಗ್ ಅಟೆಂಡ್ ಮಾಡಿದ್ದರಿಂದ ನಿಮ್ಮಂತ ಚೆಲುವೆಯನ್ನು ಕಣ್ತುಂಬಿಕೊಳ್ಳೋ ಹಾಗಾಯ್ತು. ನಿಮ್ಮ ಕವಿತೆಗಳನ್ನು ಮೊದಲೇ ಓದಿದ್ದೆ. ಈಗ ನಿಮ್ಮ ವ್ಯಕ್ತಿತ್ವವೂ ತೂಕದ್ದೇ ಅಂತ ಗೊತ್ತಾಯ್ತು'. ಅವನು ಪಟ ಪಟ ಹೇಳುತ್ತಿದ್ದರೆ ವೈಶಾಲಿಗೆ ತನ್ನ ಬಗ್ಗೆಯೇ ಹೆಮ್ಮೆ. ಊರಿಗೆ ಬಂದ್ಮೇಲೆ ಫೋನಲ್ಲಿ ಮಾತು. ಇಷ್ಟ, ಪ್ರೀತಿಯಾಗಿ ಬದಲಾಗಿತ್ತು. ಸಂದೀಪನೇ ಮದುವೆ ಪ್ರಸ್ತಾಪವಿಟ್ಟಿದ್ದ. ಅಮ್ಮನೂ ಒಪ್ಪಿದ್ರು. ಅವನ ಮನೆಯಲ್ಲೂ ತಕರಾರು ಇರಲಿಲ್ಲ. ಆದರೆ ಸಂದೀಪನೇ 'ನಂದು ಪಿಎಚ್.ಡಿ. ಮುಗಿದ ಮೇಲೇ ಮದುವೆ ಆಗೋದು. ಸದ್ಯಕ್ಕೆ ಎಂಗೇಜ್‌ಮೆಂಟ್ ಆಗಲಿ. ಇನ್ನೆರಡು ವರ್ಷ, ಥೀಸಿಸ್ ಬರೆದು ಸಲ್ಲಿಸಿದ ಮರುದಿನವೇ ಮದುವೆ' ಎಂದಿದ್ದ. ಹಾಗೇ ನಿಶ್ಚಿತಾರ್ಥವೂ ಆಯ್ತು.


ಅಬ್ಬಾ! ಎಂತಹ ಪ್ರೀತಿಯ ದಿನಗಳು ಅವು. ಬೊಗಸೆ ತುಂಬಿ ಹರಿವ ಬೆಳದಿಂಗಳ ಪ್ರೀತಿ. ಸಂದೀಪನ ಸಾಂಗತ್ಯದಲ್ಲಿ ಬದುಕಿನ ಎಲ್ಲ ನೋವುಗಳೂ ಮರೆತಂತೆ. 'ಸಂದೀಪ್, ನೀನು ಬರೀ ಸಂಗಾತಿಯಲ್ಲ. ಅಪ್ಪನ ಪ್ರೀತಿಯನ್ನು ಮರಳಿ ತಂದುಕೊಟ್ಟವನು' ಎನ್ನುತ್ತಿದ್ದಳು ವೈಶಾಲಿ. 'ವೈಶೂ ನೀನಿಲ್ಲದೆ ಬದುಕಿಲ್ಲ. ನನ್ನ ಪಿಎಚ್.ಡಿ. ವರ್ಕ್ ಮುಗಿಯಲೆಂದು ಕಾಯುತ್ತಿರುವೆ, ನಮ್ಮ ಮದುವೆಯ ದಿನಕ್ಕಾಗಿ' ಎನ್ನುತ್ತಿದ್ದ ಅವನು. ವಾರಾಂತ್ಯದಲ್ಲಿ ಜಲಪಾತ, ಕಾಡು ಎಂದು ಅಲೆಯುತ್ತಿದ್ದರು. ಬಿಡುವಿದ್ದಾಗೆಲ್ಲ ವಿಡಿಯೊ ಕಾಲ್, ವಾಟ್ಸಾಪ್ ಮೆಸೇಜ್. ಕೆಲವೊಮ್ಮೆ ನೂರೈವತ್ತು ಕಿಲೋಮೀಟರ್ ಪ್ರಯಾಣಿಸಿ ಅಚಾನಕ್ ಬಂದು ಬಿಡುತ್ತಿದ್ದ, 'ವೈಶೂ ತುಂಬ ನೆನಪಾದಿ' ಎಂದು! ಅಮ್ಮನಿಗೆ ಹೇಳಲಾಗದ ಖುಷಿ. 'ಒಳ್ಳೇ ಹುಡುಗನೇ ಸಿಕ್ಕಿದ ಮಗಳೇ. ನಿನ್ನಪ್ಪ ಇದ್ದಿದ್ರೆ ಮನಸ್ಸು ತುಂಬಿಕೊಳ್ತಿದ್ರು' ಎನ್ನುತ್ತಿದ್ದರು.

ವೈಶಾಲಿಗೆ ಎಷ್ಟೋ ಸಲ ಅನಿಸುತ್ತದೆ ವಿಷಾದವೇ ಬದುಕು ಎಂದು. ಸುಖಕ್ಕಿಂತ ದುಃಖವೇ ಜಾಸ್ತಿ. ಕಷ್ಟಗಳು ಸದಾ ಮೇಲೆರಗಲು ಹೊಂಚು ಹಾಕುತ್ತಿರುತ್ತವೆ; ನರಭಕ್ಷಕ ಹುಲಿಯಂತೆ. ಆದರೆ ನೋವನ್ನು ಫೀಲ್ ಮಾಡದಿರುವುದೂ ಶಕ್ತಿಯೇ. 'ನೋವೇ ನಿನ್ನಷ್ಟಕ್ಕೆ ನೀ ಬಿದ್ದರು ನನ್ನ ಉಗುರ ತುದಿಯನ್ನೂ ಸೋಕಲಾರೆ ನೀನು' ಎಂದು ಒಬ್ಬಳೇ ನಕ್ಕುಬಿಡುತ್ತಿದ್ದಳು.

ಆವತ್ತೊಂದಿನ ಗೆಳತಿಯರೊಂದಿಗೆ ಮಾರ್ಕೆಟ್, ಹೋಟೆಲ್ ಎಂದು ಹೋದಾಗ ವಿಪರೀತ ಸುಸ್ತಾಗಿತ್ತು. ಎಷ್ಟೆಂದರೆ ತಲೆ ಸುತ್ತುತ್ತಿದೆ ಎಂದು ಹೇಳುವಷ್ಟರಲ್ಲಿ ಪ್ರಜ್ಞೆ ತಪ್ಪಿ ಬಿದ್ದಾಗಿತ್ತು. ಆ ರಾತ್ರಿಯೆಲ್ಲ ವಿಪರೀತ ಹೊಟ್ಟೆನೋವು. ಬ್ಲೀಡಿಂಗ್. ಮರುದಿನವೇ ಬಂದ ಸಂದೀಪ ಆಸ್ಪತ್ರೆಗೆ ಕರೆದೊಯ್ದಿದ್ದ. ಆವತ್ತೇ ಡಾಕ್ಟರ್ ತೆರೇಸಾ ಹೇಳಿದ್ದು 'ಸಾರಿ ವೈಶಾಲಿ, ನಿಮ್ಮ ಗರ್ಭಕೋಶ ಆದಷ್ಟು ಬೇಗ ತೆಗೆಯಬೇಕು. ಇಲ್ಲವಾದರೆ ಪ್ರಾಣಕ್ಕೆ ಅಪಾಯ. ನಿಮಗೆ ಹಿಸ್ಟರೆಕ್ಟಮಿ ಎಂಬ ಸರ್ಜರಿಯ ಅಗತ್ಯವಿದೆ' ಎಂದು. ಸಂದೀಪ್ ಏನೂ ಹೇಳದೆ ಹೊರಟುಹೋಗಿದ್ದ.

ರೂಮಿನ ಬಾಗಿಲು ಜಡಿದು ರಾತ್ರಿಯೆಲ್ಲ ಕಲ್ಲಿನಂತೆ ಕುಳಿತು ಕತ್ತಲನ್ನು ದಿಟ್ಟಿಸಿದ್ದಳು. ಬೆಳಗಿನ ಜಾವದ ನಿದ್ದೆಯಲ್ಲಿ ಮೊದಲ ಸಲ ಮಗುವಿನ ಕನಸು! ಮೈಮನವೆಲ್ಲ ಭಾರಗೊಂಡೂ ಹಗುರಾದಂತೆ, ಗಾಳಿಯಲ್ಲಿ ತೇಲಿಹೋದಂತೆ. ಒಂದು ವಾರ ಕಾಲೇಜಿಗೆ ರಜೆ ಹಾಕಿ ಮೌನ ಹೊದ್ದು ಮಲಗಿಬಿಟ್ಟಿದ್ದಳು. ಅಮ್ಮ ನೋವಿನಲ್ಲೂ ತನಗಾಗಿ ನಗುತ್ತಿದ್ದುದು ಸ್ಪಷ್ಟವಾಗಿ ತಿಳಿಯುತ್ತಿತ್ತು. 'ಬಂದದ್ದು ಬರಲಿ, ಅಳಬಾರದು ವೈಶಾಲಿ. ಕಣ್ಣೀರಿಗೆ ಬೆಲೆಯಿಲ್ಲ' ಎನ್ನುತ್ತಿದ್ದರು. ಸಂದೀಪ್ ತನ್ನನ್ನು ಅವಾಯ್ಡ್ ಮಾಡುತ್ತಿದ್ದಾನೆ ಎಂಬ ಸತ್ಯ ಅಮ್ಮನಿಗೂ ತಿಳಿದುಹೋಗಿತ್ತು.

ಹಗಲು ರಾತ್ರಿಗಳು ನಿಲ್ಲುವುದಿಲ್ಲ. ವೈಶಾಲಿಯ ಹೃದಯ ಅಳುತ್ತಿದೆಯೆಂದು ಬೆಳದಿಂಗಳು ಬಾರದಿರುತ್ತದೆಯೆ? ದರಲೆ ಹಕ್ಕಿಗಳು ಪ್ರತಿದಿನವೂ ಕಿಟಕಿಯಲ್ಲಿ ಹುಸಿಜಗಳದಲ್ಲಿ ಮುಳುಗಿರುತ್ತವೆ. ಕೆಂಚಬೆಕ್ಕು ಮನೆಗೆ ಬಂದು ಹಾಲು ಮೊಸರು ಮೀನು ತಿಂದು ಹೋಗುತ್ತದೆ. ಅಂಗಳದ ಪಪ್ಪಾಯಿ ಸಸಿಯ ದಂಟಿನ ಮೇಲೆ ಅದ್ಯಾವುದೋ ಮರಕಪ್ಪೆ ಪ್ರತಿರಾತ್ರಿಯೂ ಧ್ಯಾನಸ್ಥವಾಗಿ ಕುಳಿತಿರುತ್ತದೆ. ರಜೆ ಮುಗಿಯಿತು. ಬೆಳಿಗ್ಗೆ ಗಡಿಬಿಡಿಯಲ್ಲಿ



## ನಂಬಿಕೆ

ನನಗೆ ನಿನ್ನ ಮೇಲೆ
ಇರೋ ನಂಬಿಕೆ
ಮಿಣುಕು ದೀಪ ಅಲ್ಲ
ಗೆಳತಿ ನೀನು
ನನಗೆ ದಾರಿ ತೋರೋ
ದೀಪಸ್ತಂಭ!

– ಕಾಸರಗೋಡು ಅಶೋಕ್ ಕುಮಾರ್